# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗಪುರ, ಮಹಾರಾಷ್ಟ್ರ

[ಭಾರತೀಯ ಕೃಷಿ ಅನುಸಂಧಾನ ಪರಿಷದ್ (ಭಾ. ಕೃ. ಅ. ಪ.), ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ]

## ಹತ್ತಿ ಬೆಳೆಯಲು ಸಾಪ್ತಾಹಿಕ ಸಲಹೆ, ಜೂಲೈ 22 ರಿಂದ 28 , 2019 ರವರೆಗೆ

### ಹವಾಮಾನ ಸಲಹೆ

| | ಜೂಲೈ ತಿಂಗಳಿನ ವಾಸ್ತವಿಕ ಮಳೆಯ ಪ್ರಮಾಣ (IMD ಆಧಾರಿತ) | | | | ಜೂಲೈ ತಿಂಗಳಿನಲ್ಲಿ ಮುನ್ಸೂಚನೆಯ ಮಳೆಯ ಪ್ರಮಾಣ (IMD ಆಧಾರಿತ) | | | | | | | ಸಲಹೆ |
|---|---|---|---|---|---|---|---|---|---|---|---|---|
| ದಿನಾಂಕ | **18** | **19** | **20** | **21** | **22** | **23** | **24** | **25** | **26** | **27** | **28** | |
| **ಕರ್ನಾಟಕ** | | | | | | | | | | | | |
| ಧಾರವಾಡ | 0.2 | 13.6 | 0 | 34 | 0 | 3 | 0 | 22 | 27 | 13 | 23 | ರಾಯಚೂರಿನಲ್ಲಿ ಬೆಳೆಯು 30 ರಿಂದ 35 ದಿನಗಳ ಹಂತದಲ್ಲಿದೆ. ಮಳೆ ಬಂದ ನಂತರ ಭೂ ಸಿದ್ಧತೆ ಮಾಡಿರುವ ಪ್ರದೇಶಗಳಲ್ಲಿ ಖರೀಫ್ ಬೆಳೆಯ ಶೇ 30 ರಷ್ಟು ಬಿತ್ತನೆ ಕಾರ್ಯ ಮುಗಿದಿದೆ. ಈ ಅವಧಿಯಲ್ಲಿ ಸಾಮಾನ್ಯವಾಗಿ ಆರ್ದ್ರ ಮತ್ತು ಮೋಡ ಕವಿದ ವಾತಾವರಣವಿತ್ತು. ಮೊದಲು ಬಿತ್ತನೆ ಮಾಡಿದ ರೈತರ ಹೊಲಗಳಲ್ಲಿ ಕಳೆಗಳು ಕಂಡುಬಂದಿವೆ. ಹೊಸದಾಗಿ ಬಿತ್ತನೆ ಮಾಡಿದ ಬೆಳೆಗೆ ಪ್ರತಿ ಲೀಟರ್ ನೀರಿಗೆ ಪೂರ್ವಭಾವಿ ಕಳೆನಾಶಕವಾದ ಪೆಂಡಿಮೆಥಾಲಿನ್ 38.7 ಸಿಎಸ್ ಅನ್ನು 2.25 ಮಿಲಿ ಸೇರಿಸಿ ಸಿಂಪಡಿಸಬೇಕೆಂದು ಸೂಚಿಸಲಾಗಿದೆ. ಜೂನ್ ತಿಂಗಳಿನಲ್ಲಿ ಬಿತ್ತನೆ ಮಾಡಿದ ಬೆಳೆಯಲ್ಲಿ ಒಂದು ಅಂತರ ಕೃಷಿಯನ್ನು ಮಾಡಲಾಗಿದೆ. 20 ರಿಂದ 25 ದಿನಗಳ ಬೆಳೆಯಲ್ಲಿ ಕಳೆಗಳ ನಿರ್ವಹಣೆಗಾಗಿ 1.25 ಮಿಲಿ ಪೈರಿತಿಯೊಬ್ಯಾಕ್ ಸೋಡಿಯಂ ಅನ್ನು 1 ಲೀ ನೀರಿನಲ್ಲಿ ಬೆರಿಸಿ ಸಿಂಪಡಿಸಬೇಕೆಂದು ಸೂಚಿಸಲಾಗಿದೆ. ಈ ಪ್ರದೇಶಗಳಲ್ಲಿ 30 ರಿಂದ 35 ದಿನಗಳ ಬೆಳೆಯಲ್ಲಿ ಥ್ರಿಪ್ಸ್ ನುಸಿ ಕೀಟಗಳು ಕಂಡುಬಂದಿದೆ. ಉತ್ತರ ಕರ್ನಾಟಕದ ಧಾರವಾಡದ ವ್ಯಾಪ್ತಿಯಲ್ಲಿರುವ ಪ್ರದೇಶಗಳಲ್ಲಿ ಬೆಳೆಯು 20 ರಿಂದ 40 ದಿನಗಳ ಹಂತದಲ್ಲಿದೆ. ಈ ವಾರದ ವರದಿಯ ಪ್ರಕಾರ ಹತ್ತಿ ಬೆಳೆಯುವ ಎಲ್ಲಾ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣವಿದ್ದು ಚಿಮುಕಿಸುವ ಮಳೆಯಾಗಿದೆ. 25 ಕೆಜಿ ಯೂರಿಯಾ ಮತ್ತು 25 ಕೆಜಿ ಮುರಿಯೇಟ್ ಆಫ್ ಪೊಟ್ಯಾಶ್ ಅನ್ನು ಬೆಳೆಗೆ ಹಾಕಲಾಗಿದೆ. ಏಕದಳ ಮತ್ತು ದ್ವಿದಳ ಕಳೆಗಳ ನಿರ್ವಹಣೆಗಾಗಿ ಹೊರಹೊಮ್ಮಿದ ಮೇಲೆ ಬಳಿಸುವ ಕಳೆನಾಶಕಗಳನ್ನು ಸಿಂಪಡಿಸುವಂತೆ ಸೂಚಿಸಲಾಗಿದೆ. ಹಾವೇರಿ ಜಿಲ್ಲೆಯಲ್ಲಿನ ಹಿರೇಕೆರೂರು ತಾಲೂಕಿನ ಗ್ರಾಮಗಳಲ್ಲಿ |
| ಹಾವೇರಿ | | | | 41 | 3 | 5 | 11 | 90 | 19 | 14 | 18 | |
| ಮೈಸೂರ್ | 0 | 0 | 7 | 51 | 40 | 207 | 529 | 66 | 22 | 17 | 9 | |

| | | | | | | | | | | | | |
|---|---|---|---|---|---|---|---|---|---|---|---|---|
| | | | | | | | | | | | | ರೆಂಬೆ ಮೂತಿ ಹುಳುಗಳು ಕಂಡುಬಂದಿವೆ. ಹಾವೇರಿ ಜಿಲ್ಲೆಯ ಗ್ರಾಮಗಳಲ್ಲಿ ಮಧ್ಯಮ ಸ್ಥಿತಿಯಲ್ಲಿ ಸಸ್ಯ ಹೇನುಗಳು ಮತ್ತು ಥ್ರಿಪ್ಸ್ ನುಸಿಗಳು ಕಂಡುಬಂದಿವೆ. ಹಾವೇರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಎಲೆ ರೋಗವು ಕಂಡುಬಂದಿದೆ.<br>**ಸಲಹೆ:**<br>ಅಂತರ ಕೃಷಿಯನ್ನು ಮಾಡಬೇಕು. ಹಸ್ತಚಾಲಿತ ಕಳೆಗಳ ನಿಯಂತ್ರಣ ಅಥವಾ ಹೊರಹೊಮ್ಮಿದ ಮೇಲೆ ಬಳಿಸುವ ಕಳೆನಾಶಕಗಳನ್ನು ಸಿಂಪಡಿಸುವಂತೆ ಸೂಚಿಸಲಾಗಿದೆ. ಸಸ್ಯಹೇನುಗಳ ನಿರ್ವಹಣೆಗಾಗಿ 0.2 ಗ್ರಾಂ ಅಸಿತಮಿಪ್ರಿಡ್ 20 ಎಸ್ ಪಿ ಅನ್ನು 1 ಲೀ ನೀರಿನಲ್ಲಿ ಬೆರಿಸಿ ಸಿಂಪಡಿಸಬೇಕು. ಥ್ರಿಪ್ಸ್ ನುಸಿಯ ನಿರ್ವಹಣೆಗಾಗಿ 1.0 ಮಿ ಲಿ ಫಿಪ್ರೋನಿಲ್ 5 ಎಸ್ ಸಿ ಅಥವಾ 3.0 ಗ್ರಾಂ ಫ್ಲೋನಿಕಾಮಿಡ್ 50 ಡಬ್ಲೂ ಜಿ ಅನ್ನು 1 ಲೀ ನೀರಿಗೆ ಬೆರೆಸಿ ಸಿಂಪಡಿಸಬೇಕು. ಎಲೆ ರೋಗವನ್ನು 2.0ಮಿ ಲಿ ಮೇಟಿರಮ್ ಶೇ 55 ಮತ್ತು ಪೈರಕೊಸ್ಟ್ರೋಬಿನ್ ಶೇ 5 ಅನ್ನು 1 ಲೀ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. |

| **ಮಳೆಯ ಮಾಹಿತಿಯ ಮಾದರಿ** | | | | | | ಮಳೆಯ ಮಾಹಿತಿಯ ಮೂಲ |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | < 5 | 5-20 | 21-50 | 51-80 | > 80 | http://imdagrimet.gov.in |

0. 0 ಮಿ.ಮೀ : ಮಳೆ ಇಲ್ಲ

ಖಾಲಿ ಇರುವ ಕೋಶ : ಮಳೆಯ ಮಾಹಿತಿ ಲಭ್ಯವಿಲ್ಲ

**ಕನ್ನಡ ಅನುವಾದ:**

ಡಾ. ಎನ್. ಚಂದ್ರಶೇಖರ್

ಡಾ. ಸವಿತಾ ಸಂತೋಷ್

(ಕೃಷಿ ವಿಜ್ಞಾನಿಗಳು, ಭಾ. ಕೃ. ಅ. ಪ- ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗಪುರ, ಮಹಾರಾಷ್ಟ್ರ)